ಎಂ ವಿ ಸಿ ನಂ. 255/2018

ಆರ್ ಡಬ್ಲ್ಯೂ: 2

ದಿನಾಂಕ 29/01/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ಅರ್ಜಿದಾರರ ಪರ: ಶ್ರೀ ಹೆಚ್ ಎನ್ ಎಸ್ ವಕೀಲರಿಂದ:</u>

ನಾನು ತನಿಖಾಧಿಕಾರಿಯಾಗಿ ಕೆಲಸ ಮಾಡಲು ಸರ್ಕಾರದಿಂದ ಅನುಮತಿ ಪಡೆದಿರುತ್ತೇನಾ ಎಂದರೆ ಸಾಕ್ಷಿ ಇಲ್ಲ ನಮ್ಮ ಸಂಸ್ಥೆಯಿಂದ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ೩ನೇ ಎದುರುದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವುದನ್ನು ಋತುವಾತು ಪಡಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ಗುರುತಿನ ಚೀಟಿ ಇದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯಲ್ಲಿ ನಾನು ತನಿಖಾಧಿಕಾರಿಯಾಗಿ ನೇಮಕಗೊಂಡ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಸಾಕ್ಷ್ಯ ನಡಿಯಲು ನಾನು ನಮ್ಮ ಸಂಸ್ಥೆಯಿಂದ ಯಾವುದೇ ಅಧಿಕಾರ ಪತ್ರ ಪಡೆದು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ತನಿಖೆ ಮಾಡಿರುವ ಬಗ್ಗೆ ವರದಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 1ನೇ ಎದುರುದಾರ ಸುರೇಶ್ ರವರ ಬಗ್ಗೆ ತನಿಖೆ ಮಾಡಿದ್ದೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಸುರೇಶ್ ಎನ್ನುವವರು ಅರ್ಜಿದಾರರೆ ಹೊರತು 1ನೇ ಎದುರುದಾರರಲ್ಲ ಎಂದರೆ

ಸಾಕ್ಷಿ ನಾನು ದ್ವಿಚಕ್ರ ಚಾಲನೆ ಮಾಡುತ್ತಿದ್ದವರ ಬಗ್ಗೆ ಮಾತ್ರ ತನಿಖೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ವಾಹನ ಚಾಲನೆ ಮಾಡುತ್ತಿದ್ದ ಕಾಂತರಾಜುರವರನ್ನು ನಾನು ತನಿಖೆ ಮಾಡಿಲ್ಲ ಎಂದರೆ ಸಾಕ್ಷಿ ನಾನು ಸದರಿ ಕಾಂತರಾಜುರವರ ಬಗ್ಗೆ ತನಿಖೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 1ನೇ ಎದುರುದಾರ ಕಾಂತರಾಜುರವರನ್ನು ಬೇಟಿ ಮಾಡಿ ತನಿಖೆ ಮಾಡಿರುವುದಾಗಿ ಹೇಳಿಲ್ಲ ಎಂದರೆ ಸಾಕ್ಷಿ ಹೇಳಿದ್ದೇನೆ ಎಂದು ನುಡಿಯುತ್ತಾರೆ. ನಾನು 1ನೇ ಎದುರುದಾರ ಕಾಂತರಾಜುರವನ್ನು ಎಂದಿಗೂ ಬೇಟಿಮಾಡಿಲ್ಲ ತನಿಖೆ ಮಾಡಿಲ್ಲ ಆಗಾಗಿ ಯಾವುದೇ ವರದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಪ್ರಕರಣ ದಾಖಲಿಸಿ ದೋಷಾರೋಪಣಾ ಪತ್ರ ಸಲ್ಲಿಸಿದ ಪೋಲೀಸ್ ಠಾಣೆಗೆ ನಾನು ಬೇಟಿ ನೀಡಿರುತ್ತೇನೆ. ಅಪಘಾತವು 1ನೇ ಎದುರುದಾರರ ತಪ್ಪಿನಿಂದ ಆಗಿದೆ ಎಂದು ದೋಷರೋಪಣಾ ಪತ್ರವನ್ನು ಪೋಲೀಸರು ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನಕ್ಕೆ 3ನೇ ಎದುರುದಾರರ ವಿಮಾ ಸಂಸ್ಥೆಯಿಂದ ವಿಮೆ ನೀಡಲಾಗಿತ್ತು ಎಂದರೆ ಸರಿ. ಅರ್ಜಿದಾರರಿಗೆ ಪರಿಹಾರ ನೀಡಲು ವಿಮಾ ಸಂಸ್ಥೆಯವರೇ ಬಾದ್ಯರು ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದೆ ಇದ್ದರೂ ಸಹ ನಮ್ಮ ಸಂಸ್ಥೆಯ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 2ನೇ ಎದುರುದಾರರ ಪರಃ ಶ್ರೀ ಸಿ ಜಿ ಆರ್ ವಕೀಲರಿಂದಃ**

**1** ಮತ್ತು **2**ನೇ ಎದುರುದಾರರ ಪರ ವಕೀಲರು ಹಾಜರಿದ್ದು ಅರ್ಜಿದಾರರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.